# ಶುಭವಾರ್ತೆ ಕಥಾಪುಸ್ತಕ

## ಒಂದು





ಇದು ನನ್ನ ಶುಭವಾರ್ತೆ ಮೊದಲನೆ ಕಥಾಪುಸ್ತಕ

ನನ್ನ ಹೆಸರು

______________________________

ನನ್ನ ಶುಭವಾರ್ತೆ ಮೊದಲನೆ ಕಥಾಪುಸ್ತಕವನ್ನು
ನಾನು ಓದಬಲ್ಲೆ

ಈ ಕಥೆಗಳನ್ನು ಸೃಷ್ಟಿಕರ್ತನಾದ ದೇವರ ಪವಿತ್ರ ಪುಸ್ತಕದಿಂದ ಆರಿಸಿಕೊಳ್ಳಲಾಗಿದೆ.

ಈ ಕಥಾಪುಸ್ತಕದಲ್ಲಿರುವ ಎಲ್ಲ ಚಿತ್ರಗಳನ್ನು ಭಾರತದ ಬುಡಕಟ್ಟು ಮಕ್ಕಳು ಬರೆದಿದ್ದಾರೆ.
ಶುಭವಾರ್ತೆ ಕಥಾಪುಸ್ತಕ ಒಂದು. ಕಾಪಿರೈಟ್ 2017. ಪ್ರಿಂಟೆಡ್ ಇನ್ ಇಂಡಿಯಾ. ಹೆಚ್ಚಿನ ವಿಷಯಗಳಿಗಾಗಿ ಸಂಪರ್ಕಿಸಿ:
WBTC India, P.O. Box 8478, Bangalore 560084. Email: info@wbtcindia.com



ಸೃಷ್ಟಿಕರ್ತನಾದ ದೇವರು ...................... 2-9
ಅತ್ಯಂತ ಬಲಶಾಲಿ ........................... 10-13
ಕತ್ತಲೆಯಲ್ಲಿ ತಪ್ಪಿಹೋದವರು .............. 14-24

# ಸೃಷ್ಟಿಕತತನಾದ ದೇವರು

ನಕ್ಷತ್ರಗಳು ನನಗೆ ಕಾಣುತ್ತಿವೆ.
ನಕ್ಷತ್ರಗಳು ಹಾಡುತ್ತಿವೆ.







ಪ್ರಾಣಿಗಳು ನನಗೆ ಕಾಣುತ್ತಿವೆ.
ಪ್ರಾಣಿಗಳು ಹಾಡುತ್ತಿವೆ.



ಆತ್ಮಗಳು ನನಗೆ ಕಾಣುತ್ತಿವೆ.
ಆತ್ಮಗಳು ಹಾಡುತ್ತಿವೆ.







ಮೊದಲನೆ ಪುರುಷ ಮತ್ತು ಸ್ತ್ರೀ
ನನಗೆ ಕಾಣುತ್ತಿದ್ದಾರೆ.
ಮೊದಲನೆ ಪುರುಷ ಮತ್ತು ಸ್ತ್ರೀ
ಹಾಡುತ್ತಿದ್ದಾರೆ.

ಸೃಷ್ಟಿಕರ್ತನಾದ ದೇವರು ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ನಾನು ನಿಮ್ಮನ್ನು ಪ್ರೀತಿಸುತ್ತೇನೆ!’
ನಾನು ಹಾಡಲಾರಂಭಿಸಿದೆ.








ಮೊದಲನೆ ಪುರುಷ ಮತ್ತು ಸ್ತ್ರೀ
ನನಗೆ ಕಾಣುತ್ತಿದ್ದಾರೆ.

ಮೊದಲನೆ ಪುರುಷ ಮತ್ತು ಸ್ತ್ರೀ
ಹಾಡುತ್ತಿದ್ದಾರೆ.



ಪ್ರತಿಯೊಂದು ಹಾಡುತ್ತಾ...ಹಾಡುತ್ತಾ...
ಹಾಡುತ್ತಾ ಇರುವುದು ನನಗೆ ಕೇಳಿಸುತ್ತಿದೆ.







ಪ್ರತಿಯೊಂದು ಸೃಷ್ಟಿಕರ್ತನಾದ
ದೇವರಿಗೆ ಹಾಡುತ್ತಿದೆ.

ಸೃಷ್ಟಿಕರ್ತನಾದ ದೇವರು
ಪ್ರತಿಯೊಂದನ್ನು ಸೃಷ್ಟಿಸಿದನು.

# ಅತ್ಯಂತ ಬಲಶಾಲಿ

ಕೆಟ್ಟ ಆತ್ಮವು ಹೀಗೆ ಹೇಳುತ್ತಿರುವುದು
ನನಗೆ ಕೇಳಿಸುತ್ತಿದೆ:

‘ನಾನು ಸೃಷ್ಟಿಕರ್ತನಾದ
ದೇವರಂತಾಗುವೆ.’







ಒಳ್ಳೆಯ ಆತ್ಮಗಳು ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

‘ಸೃಷ್ಟಿಕರ್ತನಾದ ದೇವರಿಗೆ ಹಾಡಿರಿ.’



ಒಳ್ಳೆಯ ಮತ್ತು ಕೆಟ್ಟ ಆತ್ಮಗಳು
ಹೊಡೆದಾಡುತ್ತಿರುವುದು ನನಗೆ ಕಾಣುತ್ತಿದೆ.

ಒಳ್ಳೆಯ ಆತ್ಮಗಳು ಗೆಲ್ಲುತ್ತಿವೆ.








ಕೆಟ್ಟ ಆತ್ಮಗಳು ಬೀಳುತ್ತಾ...
ಬೀಳುತ್ತಾ...ಬೀಳುತ್ತಾ ಇರುವುದು
ನನಗೆ ಕಾಣುತ್ತಿದೆ.

'ಸೃಷ್ಟಿಕರ್ತನಾದ ದೇವರು
ಅತ್ಯಂತ ಬಲಶಾಲಿ!'


# ಕತ್ತಲೆಯಲ್ಲಿ ತಪ್ಪಿಹೋದವರು

ಮೊದಲನೆ ಪುರುಷ ಮತ್ತು ಸ್ತ್ರೀ
ನನಗೆ ಕಾಣುತ್ತಿದ್ದಾರೆ.



ಸೃಷ್ಟಿಕರ್ತನಾದ ದೇವರು ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

'ಒಳ್ಳೆಯದು ಮತ್ತು ಕೆಟ್ಟದ್ದು ಎಂಬ
ಮರದ ಹಣ್ಣನ್ನು ತಿನ್ನಬೇಡಿ.'







ಮೊದಲನೆ ಪುರುಷ ಮತ್ತು ಸ್ತ್ರೀ
ಕೇಳಿಸಿಕೊಳ್ಳುತ್ತಿಲ್ಲ...ಕೇಳಿಸಿಕೊಳ್ಳುತ್ತಿಲ್ಲ...
ಕೇಳಿಸಿಕೊಳ್ಳುತ್ತಿಲ್ಲ.

ಕೆಟ್ಟ ಆತ್ಮವು ಹೀಗೆ ಹೇಳುತ್ತಿರುವುದು
ನನಗೆ ಕೇಳಿಸುತ್ತಿದೆ:

‘ನೀನು ಸೃಷ್ಟಿಕರ್ತನಾದ
ದೇವರಂತಾಗುವೆ.

ಒಳ್ಳೆಯದು ಮತ್ತು ಕೆಟ್ಟದ್ದು ಎಂಬ
ಮರದ ಹಣ್ಣನ್ನು ತಿನ್ನಿರಿ.’








ಮೊದಲನೆ ಸ್ತ್ರೀ ಕೇಳಿಸಿಕೊಳ್ಳುತ್ತಿದ್ದಾಳೆ...
ಕೇಳಿಸಿಕೊಳ್ಳುತ್ತಿದ್ದಾಳೆ...
ಕೇಳಿಸಿಕೊಳ್ಳುತ್ತಿದ್ದಾಳೆ.

ಮೊದಲನೆ ಸ್ತ್ರೀ ಹೀಗೆ ಹೇಳುತ್ತಿರುವುದು
ನನಗೆ ಕೇಳಿಸುತ್ತಿದೆ:

‘ನಾನು ಸೃಷ್ಟಿಕರ್ತನಾದ
ದೇವರಂತಾಗುವೆ.

ಒಳ್ಳೆಯದು ಮತ್ತು ಕೆಟ್ಟದ್ದು ಎಂಬ
ಮರದ ಹಣ್ಣನ್ನು ತಿನ್ನುವೆನು.’







ಮೊದಲನೆ ಸ್ತ್ರೀ ತಿನ್ನುತ್ತಾ...ತಿನ್ನುತ್ತಾ...
ತಿನ್ನುತ್ತಾ ಇದ್ದಾಳೆ.

ಮೊದಲನೆ ಪುರುಷ ಹೀಗೆ
ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

'ನಾನು ಸೃಷ್ಟಿಕರ್ತನಾದ
ದೇವರಂತಾಗುವೆ.

ಒಳ್ಳೆಯದು ಮತ್ತು ಕೆಟ್ಟದ್ದು ಎಂಬ
ಮರದ ಹಣ್ಣನ್ನು ತಿನ್ನುವೆನು.'









ಮೊದಲನೆ ಪುರುಷ ತಿನ್ನುತ್ತಾ...
ತಿನ್ನುತ್ತಾ...ತಿನ್ನುತ್ತಾ ಇದ್ದಾನೆ.

ಮೊದಲನೆ ಪುರುಷನನ್ನು ಮತ್ತು ಸ್ತ್ರೀಯನ್ನು ನೋಡಲು ಪ್ರಯತ್ನಿಸುತ್ತಿದ್ದೇನೆ.

ಮೊದಲನೆ ಪುರುಷ ಮತ್ತು ಸ್ತ್ರೀ ಅವಿತುಕೊಂಡಿದ್ದಾರೆ.








ಸೃಷ್ಟಿಕರ್ತನಾದ ದೇವರು ಹೀಗೆ ಹೇಳುತ್ತಿರುವುದು ನನಗೆ ಕೇಳಿಸುತ್ತಿದೆ:

'ನಾನು ನಿಮ್ಮನ್ನು ಇನ್ನೂ ಪ್ರೀತಿಸುತ್ತೇನೆ!'

‘ನಾನು ನಿಮ್ಮನ್ನು ಕಾಪಾಡುತ್ತೇನೆ.
ನೀವು ನನ್ನನ್ನು ಕಂಡುಕೊಳ್ಳುವಿರಿ.’

ಸೃಷ್ಟಿಕರ್ತನಾದ ದೇವರು
ಬರುತ್ತಿದ್ದಾನೆ...

